House. ಯಾರಿಗೆ ಇದನ್ನೆಲ್ಲಾ ಹೇಳುತ್ತಿದ್ದಾರೆ. ಎಲ್ಲರ ಬಗ್ಗೆಯೂ ಸುಮ್ಮನೆ ಕುಳಿತುಕೊಳ್ಳುತ್ತೇನೆ. ಏನೋ ಮಾತನಾಡುತ್ತೇವೆ, ಸುಮ್ಮನೆ ಕುಳಿತುಕೊಳ್ಳುತ್ತೇವೆ. ಅಲ್ಲಿ ಮಳೆಗಾಲದಲ್ಲಿ ಮಿಷನ್‌ಗಳನ್ನು ಎಳೆಯುವುದಕ್ಕೆ ಆಗುವುದಿಲ್ಲ. ಮಳೆಗಾಲದಲ್ಲಿ ದುಡ್ಡನ್ನು ಕೊಟ್ಟರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಹೇಮಾವತಿ ಸರ್ಕಲ್ ಒಂದಕ್ಕೆ, ತುಮಕೂರ್ ಸರ್ಕಲ್ ಒಂದಕ್ಕೆ 13ಕೋಟಿ ರೂಪಾಯಿಗಳ ಬಿಲ್‌ಗಳ ಬಾಕಿ ಇದೆ. Apart from land acquisition, apart from the Establishment Rs. 13 crores is pending. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ಸಂಖ್ಯೆಯು ಬರೀ ಸತ್ಯಕ್ಕೆ ದೂರವಾದುದು ಅಲ್ಲ, ಅತ್ಯಂತ ಅಸತ್ಯವಾದಂತಹ ನೂರಕ್ಕೆ ನೂರು ಹಸಿಸುಳ್ಳಾದಂತಹ ಅಂಕಿ ಸಂಖ್ಯೆಯನ್ನು ಕೊಟ್ಟಿದ್ದಾರೆ. ಆದರೂ ಪರವಾಗಿಲ್ಲ, ಅವರು ಮುಖ್ಯಮಂತ್ರಿಗಳಾಗಿ ಬಂದು ಮೂರು ತಿಂಗಳಾಗಿದೆ. ಯಾವುದೇ ಮಂತ್ರ ದಂಡದ ಮುಖಾಂತರ ಬೊಕ್ಕಸವನ್ನು ತುಂಬಿಸಲಿಕ್ಕೆ ಸಾಧ್ಯವಿಲ್ಲ, ಅದು ನನಗೆ ಗೊತ್ತಿದೆ. ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇರುವ ದುಡ್ಡನ್ನು ಆದ್ಯತೆಯ ಮೇಲೆ ಅವಶ್ಯಕ ವಸ್ತುಗಳಿಗೆ, ಅವಶ್ಯಕ ಕಾರ್ಯಕ್ರಮಗಳಿಗೆ ಕೊಡುವಂತಹ ಕ್ರಮವನ್ನು ಕೈಗೊಳ್ಳುತ್ತಾರೆಯೇ ? ಇದು ಬಹಳ ಮುಖ್ಯವಾದುದು. ಏಕೆಂದರೆ ಇದರಿಂದ ಕೆಲವು ಕೆಲಸಗಳು ನಿಂತು ಹೋಗುತ್ತವೆ. ಕೋಮು ಗಲಭೆಗಳ ಬಗ್ಗೆ ವಿಚಾರಣೆಯನ್ನು ಮಾಡುತ್ತೀರಾ ? ಆದ್ಯತೆಯ ಮೇಲೆ ನೀರಾವರಿಗೆ ದುಡ್ಡು ಬಿಡುಗಡೆ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿದಂತಹ ಯಾವುದೇ ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ. ಜಿಲ್ಲಾಪರಿಷತ್ತಿಗೆ 302 ಕೋಟಿ ರೂಪಾಯಿಯನ್ನು ಬಾಕಿ ಕೊಡಬೇಕಾಗಿದೆಯೆಂದು ಮಂತ್ರಿಗಳು ಉತ್ತರ ಕೊಡುತ್ತಾರೆ. ಇವರು ಅಂಕಿಅಂಶಗಳ ವ್ಯತ್ಯಾಸವನ್ನು ಹೇಳುತ್ತಾರೆ. ಸುಮಾರು 36 ಕೋಟಿ ರೂಪಾಯಿ ಸಬ್ಸಿಡಿಯ ಹಣ ಬಿಡುಗಡೆ ಮಾಡಿಲ್ಲ.

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೇ ತಾವು ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿಯೂ ಏನೂ ತಿಳಿಯಲಿಲ್ಲ, ಉತ್ತರದಲ್ಲಿಯೂ ಏನೂ ಇಲ್ಲ. ಇವತ್ತು ಈ ಸರ್ಕಾರಕ್ಕೆ ರೈತರ ಬಗ್ಗೆ ಗ್ರಾಮೀಣ ಜನರ ಬಗ್ಗೆ ಏನೂ ಕಳಕಳಿ ಇಲ್ಲ. ಇದನ್ನು ಪ್ರತಿಭಟನೆ ಮಾಡಿ ನಾವು ವಾಕ್‌ಔಟ್ ಮಾಡಿ ಹೋಗುತ್ತಿದ್ದೇನೆ. ಸಬ್ಸಿಡಿ ಹಣ ಬಿಡುಗಡೆ ಮಾಡಿಲ್ಲ. ರೈತರಿಗೆ ಬೇಕಾದಂತಹ ಪರಿಹಾರ ನೀವು ಕೊಡುವುದಕ್ಕೆ ಸಿದ್ಧರಿಲ್ಲ. 36ಕೋಟಿ ರೂಪಾಯಿಯ ಸಬ್ಸಿಡಿಯಲ್ಲಿ ಒಂದು ಪೈಸೆ ಕೊಡಲಿಲ್ಲ. 302 ಕೋಟಿ ರೂಪಾಯಿಯನ್ನು ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯತಿಗೆ ಕೊಡಬೇಕು, ಅದನ್ನು ಕೊಟ್ಟಿಲ್ಲ. ಅತಿವೃಷ್ಟಿಗೆ ಸಿಕ್ಕಂತಹ ರೈತರಿಗೆ ಮೂರು ತಿಂಗಳಾಯಿತು, ಅದಕ್ಕೆ ಸರಿಯಾದಂತಹ ಪರಿಹಾರವನ್ನು ಒದಗಿಸಿ ಕೊಟ್ಟಿಲ್ಲ. ಇಲ್ಲಿ ನಾವು ತಿಳಿದುಕೊಂಡು ಏನು ಮಾಡೋಣ. ರಾಜ್ಯಪಾಲರ ಭಾಷಣದಲ್ಲಿ ಏನೂ ಇಲ್ಲ. ಆದ್ದರಿಂದ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರು, ಮಾನ್ಯ ಈಶ್ವರಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್:– ಇವರು ಸಭಾತ್ಯಾಗ ಮಾಡುವುದನ್ನು ನನಗೆ ಹೇಳಲೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ರಾಂಭಜನ್ 6.30ಕ್ಕೆ ಇದೆ, ಅದಕ್ಕೆ ಅವರು ಹೊರಟಿದ್ದಾರೆ.